ಓ ಎಸ್ ನಂಃ 54-17
ಪಿ ಡಬ್ಲ್ಯೂ ಃ 1

ದಿಃ 30-08-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಸಿ ಡಿ ಪಿ ವಕೀಲರಿಂದ**

12. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

13. ತೆರಿಗೆ ನಿರ್ಧರಣಾ ಪಟ್ಟಿಯ ನಕಲನ್ನು ನಿಪಿ 1 ಎಂದು, ತೆರಿಗೆ ಬೇಡಿಕೆ ಪಟ್ಟಿಯ ನಕಲನ್ನು ನಿಪಿ 2 ಎಂದು, ದಿಃ21.08.2013 ರ ನೋಂದಾಯಿತ ಕರಾರು ಪತ್ರವನ್ನು ನಿಪಿ 3 ಎಂದು, ಅದರಲ್ಲಿ ಪ್ರತಿ ಪುಟಕ್ಕೆ ಪ್ರತಿವಾದಿಗಳು 1 ಮತ್ತು 2 ರವರು ಸಹಿ ಮಾಡಿದ್ದು ಅದರ ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ 3 ಎ ಮತ್ತು ನಿಪಿ 3 ಬಿ ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 3 ಸಿ ಎಂದು, ಋಣಬಾರ ಪತ್ರವನ್ನು ನಿಪಿ 4 ಎಂದು, ದಿಃ07.02.2014 ರ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ 5 ಎಂದು, ನೋಟೀಸಿನ ಕಚೇರಿ ಪ್ರತಿಯನ್ನು ನಿಪಿ 6 ಎಂದು, 5 ಅಂಚೆ ರಸೀದಿಗಳನ್ನು ಕ್ರಮವಾಗಿ ನಿಪಿ 7 ರಿಂದ 11 ಎಂದು, ಕಂಟಿನ್ಯೂಯಸ್ ಡೋರ್ ಲಾಕ್ ಎಂಬ ಹಿಂಬರಹದೊಂದಿಗೆ ವಾಪಸ್ಸಾದ ಮೂರು ಆರ್ ಪಿ ಎ ಡಿ ಅಂಚೆ ಕವರ್ ಗಳನ್ನು ತೆರೆದು ಅಂಚೆ ಕವರ್ ಗಳನ್ನು ಕ್ರಮವಾಗಿ ನಿಪಿ 12 ರಿಂದ 14 ಎಂದು, ಅದರಲ್ಲಿರುವ ನೋಟೀಸುಗಳನ್ನು ಕ್ರಮವಾಗಿ ನಿಪಿ 12 ಎ, ನಿಪಿ 13 ಎ ಹಾಗೂ ನಿಪಿ 14 ಎ ಎಂದು ಗುರುತಿಸಲಾಯಿತು, ಎರಡು ಅಂಚೆ ಸ್ವೀಕೃತಿಗಳನ್ನು ಕ್ರಮವಾಗಿ ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು.
ಮುಂದುವರೆದ ಮುಖ್ಯ ವಿಚಾರಣೆ ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.